ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,
ಚಿಕ್ಕಮಗಳೂರು
ಸಿ.ಸಿ.ನಂ. 44 : 2018

| | | |
|---|---|---|
| ಸಾಕ್ಷಿದಾರರ ಹೆಸರು | : ಯು. ನಾಗೇಶ್ | ಪಿ.ಡಬ್ಲ್ಯೂ: 9 |
| ತಂದೆಯ ಹೆಸರು | : ಎಲ್ ಎಸ್ ಉಡುಪಿಕರ್ | ಸಿ.ಡಬ್ಲ್ಯೂ: 12 |
| ವಯಸ್ಸು | : 63 ವರ್ಷ | |
| ವೃತ್ತಿ | : ಜೆರಾಕ್ಸ ಅಂಗಡಿ | |
| ವಾಸ | : ಚಿಕ್ಕಮಗಳೂರು | |

ದಿನಾಂಕ: 11-10-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಹಿರಿಯ ಎಪಿಪಿ ರವರಿಂದ:-

ನನಗೆ ದೀಪಾ ತಬಸುಮ್ ಅಂದರೆ ಆರೋಪಿ ಗೊತ್ತಿಲ್ಲ. ಚಾಸಾ-1 ರಿಂದ 11 ಮತ್ತು 13 ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಏನೂ ಮಾಹಿತಿ ಇಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಎಪಿಪಿರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ವಾದ ಕೇಳಿ ಅನುಮತಿಯನ್ನು ನೀಡಿದೆ.)

ಪಾಟೀ ಸವಾಲು:- ಎಪಿಪಿ ರವರಿಂದ:

ನಾನು ಚಿಕ್ಕಮಗಳೂರು ನಗರದ ಸಗನೀಪುರ ರಸ್ತೆಯಲ್ಲಿ ಸ್ನೇಹ ಎಸ್ ಟಿ ಡಿ ಮತ್ತು ಮೋದಿ ಜೆರಾಕ್ಸ ಇಟ್ಟುಕೊಂಡಿದ್ದೆ ಎಂದರೆ ಸರಿ. ಆ ಸಮಯದಲ್ಲಿ ಚಾಸಾ-13, 14 ಕೆಲಸದಲ್ಲಿದ್ದರು ಎಂದರೆ ಚಾಸಾ-14 ರವರು ಮಾತ್ರ ಇದ್ದರು. ದಿ: 13.5.2006 ರಂದು ಮಧ್ಯಾಹ್ನ ನಾನು ಎಸ್ ಟಿ ಡಿ ಬೂತ್ ಗೆ ಹೋದಾಗ ಚಾಸಾ-13, 14 ರವರು ಒಂದು ನೀಲಿ ಬುರ್ಕಾ ಹಾಕಿಕೊಂಡಿದ್ದ ಮುಸ್ಲಿಂ ಹೆಂಗಸು ನಮ್ಮ ಎಸ್ ಟಿ ಡಿ ಬೂತ್ ಗೆ ಬಂದು ಪೋಲಿಸ್ ಅಧಿಕಾರಿಗಳಿಗೆ ಬಾಬಾ ಬುಡನ್ ಗಿರಿ ವಿಚಾರದಲ್ಲಿ ಜೋರಾಗಿ ಮಾತನಾಡುತ್ತಿದ್ದರು ಸರಿಯಾಗಿ ಕೇಳುತ್ತಿರಲಿಲ್ಲ ಅಂತ ನನಗೆ ತಿಳಿಸಿದರು ಎಂದರೆ ಚಾಸಾ-14 ರವರು ಹೇಳಿದ್ದಾರೆ ಚಾಸಾ-13 ಕಸ್ಟಮರ್ ಇರಬಹುದು. ದಿ: 17.5.2006 ರಂದು ಮಧ್ಯಾಹ್ನ 2.05 ರ ಸಮಯದಲ್ಲಿ ಪುನ: ಆ ಹೆಂಗಸು ಫೋನ್ ಮಾಡಲು ಬಂದಾಗ ಪೋಲಿಸರಿಗೆ ಸಿಕ್ಕಿದರು ಅಂತ ಗೊತ್ತಾಯಿತು ಎಂದರೆ ಸರಿಯಲ್ಲ. ಎಸ್ ಟಿ ಡಿ ಬೂತ್ ನಲ್ಲಿ ಕೆಲಸ ಮಾಡುತ್ತಿದ್ದವರಿಂದ ನನಗೆ ವಿಷಯ ತಿಳಿಯಿತು ಎಂದರೆ ಸರಿಯಲ್ಲ. ಆ ಹೆಂಗಸಿನ ದೀಪಾ ಯಾನೆ ತಬಸುಮ್ ಷರೀಫ್, ಬೆಂಗಳೂರು ವಾಸಿ ಅಂತ ಪೋಲಿಸರಿಂದ ಗೊತ್ತಾಯಿತು ಎಂದರೆ ನನಗೆ ಗೊತ್ತಿಲ್ಲ. ಆ ಹೆಂಗಸು ತಾನು ಸಿ ಬಿ ಐ ಅಧಿಕಾರಿ ಅಂತ

ಹೇಳಿಕೊಂಡು ಬಾಬಾ ಬುಡನ್ ಗಿರಿಯಲ್ಲಿ ಬಯೋತ್ಪಾದಕ ಚಟುವಟಿಕೆ ನಡೆಯುತ್ತಿದೆ ನೀವು ಸಮರ್ಪಕವಾಗಿ ಬಂದೂಬಸ್ತು ಮಾಡಿಲ್ಲ ಅಂತ ಫೋನ್ ಮೂಲಕ ಪೋಲಿಸರಿಗೆ ಸುಳ್ಳು ಮಾಹಿತಿ ನೀಡುತ್ತಿದ್ದರು ಅಂತ ಗೊತ್ತಾಯಿತು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ದಿಃ 19.5.2006 ರಂದು ಪೋಲಿಸರ ಮುಂದೆ ನಿಪಿ-15 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ. ಚಿಕ್ಕಮಗಳೂರು.